ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ:ಸಿಬಿ2/10/2019-20.
ಓಬಿ ಸಂ:986/2020

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಕಚೇರಿ,
ಕರ್ನಾಟಕ ರಾಜ್ಯ, ಬೆಂಗಳೂರು-560 001
ದಿನಾಂಕ:22-04-2020.

## ಅಧಿಸೂಚನೆ

ವಿಷಯ: ದಿನಾಂಕ:01.01.2020 ರಲ್ಲಿದ್ದಂತೆ ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ರವರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1. ಈ ಕಛೇರಿಯ ಅಧಿಸೂಚನೆಯ ಸಮ ಸಂಖ್ಯೆ ದಿನಾಂಕ: 10.01.2020 ರಂದು ಪ್ರಕಟಿಸಲಾದ ಪಿ.ಐ.(ಸಿವಿಲ್) ತಾತ್ಕಾಲಿಕ ಜೇಷ್ಠತಾ ಪಟ್ಟಿ.
2. ಈ ಕಛೇರಿಯ ಅಧಿಸೂಚನೆ ಸಂಖ್ಯೆ:266/ಸಿಬ್ಬಂದಿ-1/2019-20, ದಿನಾಂಕ:03.03.2020 ರಲ್ಲಿ ಪ್ರಕಟಗೊಂಡಿರುವ ಪಿ.ಎಸ್.ಐ.(ಸಿವಿಲ್) ಅಂತಿಮ ಜೇಷ್ಠತಾ ಪಟ್ಟಿ.

****

ಉಲ್ಲೇಖಿತ (1) ರ ಈ ಕಛೇರಿಯ ಅಧಿಸೂಚನೆಯಲ್ಲಿ ಪಿ.ಐ.(ಸಿವಿಲ್) ವೃಂದದ ಉಳಿಕೆ ಮೂಲ ವೃಂದ ಮತ್ತು ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಯಾವುದಾದರು ಆಕ್ಷೇಪಣೆಗಳಿದಲ್ಲಿ ಪೂರಕ ದಾಖಲಾತಿಗಳೊಂದಿಗೆ . ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಅದರಂತೆ, ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಯಲ್ಲಿ ರಾಜ್ಯಾವಾರು ಸ್ಥಳೀಯ ಮತ್ತು ಪರಸ್ಥಳೀಯ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳಿಗೆ ಅನುಬಂಧ-ಎ ಮತ್ತು ಬಿ ನಲ್ಲಿ ಉತ್ತರಿಸಲಾಗಿದೆ.

## ಅನುಬಂಧ-ಎ

## ಪಿ.ಐ.(ಸಿವಿಲ್) ಉಳಿಕೆ ಮೂಲ ವೃಂದದ ತಾತ್ಕಾಲಿಕ ರಿವ್ಯೂ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಬಂದಿರುವ ಆಕ್ಷೇಪಣೆಗಳ ವಿವರ / ಷರಾ

| ಕ್ರಮ ಸಂ. | ಹೆಸರು ಮತ್ತು ಹುದ್ದೆ ಶ್ರೀಯುತರು | ಆಕ್ಷೇಪಣೆ | ಉತ್ತರ |
|---|---|---|---|
| 1. | ಜಿ.ಕೆ.ಸುಬ್ರಹ್ಮಣ್ಯ, ಪಿ.ಐ. | ಈ ಕಛೇರಿಯಿಂದ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಯನ್ನು ಸಲ್ಲಿಸಿದ್ದು, ಸದರಿ ಪಟ್ಟಿಯಲ್ಲಿ ನನ್ನ ಜನ್ಮ ದಿನಾಂಕ ಹಾಗೂ ಸೇವೆಗೆ ಸೇರಿದ ದಿನಾಂಕಗಳು ತಪ್ಪಾಗಿ ನಮೂದಾಗಿದ್ದು, ಅದನ್ನು ಜನ್ಮ ದಿ: 28.05.1975 ಎಂದು ಹಾಗೂ ಸೇವೆ ಸೇರಿದ ದಿನಾಂಕವನ್ನು 03.09.2007 ಎಂದು ನಮೂದಿಸಿ ಸರಿಪಡಿಸುವಂತೆ ಕೋರಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. | ಈ ಸಂಬಂಧ ಪರಿಶೀಲಿಸಲಾಗಿದ್ದು, ಸದರಿಯವರ ಸೇವಾ ಪುಸ್ತಕದಲ್ಲಿದಂತೆ ಅವರ ಜನ್ಮ ದಿನಾಂಕವನ್ನು ದಿನಾಂಕ 28.05.1975 ಎಂದು ಹಾಗೂ ಸೇವೆಗೆ ಸೇರಿದ ದಿನಾಂಕವನ್ನು 03.09.2007 ಎಂದು ಕ್ರಮ ಸಂ: 3093 ರಲ್ಲಿ ನಮೂದಿಸಿ ಜೇಷ್ಠತಾ ಪಟ್ಟಿಯಲ್ಲಿ ಸರಿಪಡಿಸಲಾಗಿದೆ. |

| | | | |
|---|---|---|---|
| 2. | ಕಿರಣ್ ವಿ.ಕಾಂಬ್ಳೆ, ಪಿ.ಐ. | ಈ ಕಛೇರಿಯಿಂದ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದು, ಸದರಿ ಪಟ್ಟಿಯಲ್ಲಿ ನನ್ನ ಹೆಸರಿನ ಮುಂದೆ ಎಸ್.ಸಿ. ಎಂದು ನಮೂದಾಗಿರುವುದಿಲ್ಲ. ಆದ್ದರಿಂದ, ಅದನ್ನು ನಮೂದಿಸಿ ಸರಿಪಡಿಸುವಂತೆ ಕೋರಿರುತ್ತಾರೆ. | ಈ ಸಂಬಂಧ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಸದರಿಯವರ ಹೆಸರಿನ ಮುಂದೆ ಕಲಂ 8 ನಲ್ಲಿ ಎಸ್.ಸಿ. ಎಂದು ಕ್ರಮ ಸಂಖ್ಯೆ: 2980 ರಲ್ಲಿ ನಮೂದಿಸಲಾಗಿದೆ. |
| 3. | ಹೆಚ್.ಡಿ.ಅನಿಲ್ ಕುಮರ್,ಪಿ.ಐ. | ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:3064 ರಲ್ಲಿ ನನ್ನ ಹೆಸರು ನಮೂದಾಗಿದ್ದು, ANILKUMAR H.D. ಎಂಬುದಕ್ಕೆ ಬದಲಾಗಿ ANILKUMAR H.B. ಎಂದು ನಮೂದಾಗಿರುತ್ತದೆ. ಆದ್ದರಿಂದ, ANILKUMAR H.D. ಎಂದು ಸರಿಪಡಿಸುವಂತೆ ಕೋರಿರುತ್ತಾರೆ. | ಈ ಸಂಬಂಧ ಪರಿಶೀಲಿಸಲಾಗಿದ್ದು, ಅವರ ಹೆಸರನ್ನು ANILKUMAR H.D. ಎಂದು ಕ್ರಮ ಸಂ: 3058 ರಲ್ಲಿ ನಮೂದಿಸಿ ಸರಿಪಡಿಸಲಾಗಿದೆ. |
| 4. | ಸಂದೀಪ್ ಬಿ.ಕೌರಿ, ಪಿ.ಐ. | 2003ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇಮಕಾತಿ ಹೊಂದಿದ್ದು, ಪಿ.ಎಸ್.ಐ. ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಶ್ರೀನಿವಾಸ್ ಚಂದ್ರಪ್ಪ ಮೇಟಿ ರವರ ಹೆಸರಿನ ಕೆಳಗೆ ನನ್ನ ಹೆಸರು ನಮೂದಾಗಿರುತ್ತದೆ. ಶ್ರೀ ಶ್ರೀನಿವಾಸ ಚಂದ್ರಪ್ಪ ಮೇಟಿ ರವರಿಗೆ ಪಿ.ಐ. ಹುದ್ದೆಯಲ್ಲಿ ದಿನಾಂಕ: 19.08.2011 ರಿಂದ ಮುಂಬಡ್ತಿಗೆ ಪರಿಗಣಿತ ದಿನಾಂಕವನ್ನು ನೀಡಲಾಗಿರುತ್ತದೆ. ಆದರೆ, ನನಗೆ ದಿನಾಂಕ: 03.09.2015 ರಲ್ಲಿ ಮುಂಬಡ್ತಿ ಹೊಂದಲಾಗಿದೆ ಎಂದು ನಮೂದಿಸಲಾಗಿರುತ್ತದೆ. ನನಗಿಂತ ಸೇವೆಯಲ್ಲಿ ಕಿರಿಯರಾದ ಶ್ರೀ ಶರಣಗೌಡ ಹೀರೆಕೆಂಚನಗೌಡ, ಚನ್ನೇಗೌಡ ರವರುಗಳು 2011 ರಿಂದ ಮುಂಬಡ್ತಿ ಹೊಂದಿರುವುದಾಗಿ ಅವರಿಗೆ ನನಗಿಂತ ಮೇಲೆ ಪಿ.ಐ. ಜೇಷ್ಠತೆಯನ್ನು ನಿಗಧಿಪಡಿಸಲಾಗಿರುತ್ತದೆ. ನಾನು ದಿನಾಂಕ: 01.09.2012 ರಿಂದ ಪಿ.ಐ. ಹುದ್ದೆಯ ಮುಂಬಡ್ತಿಗೆ ಅರ್ಹನಿದ್ದು ನನಗೆ ದಿನಾಂಕ: 01.09.2012 ರಿಂದ ಪಿ.ಐ. ಹುದ್ದೆಯಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಿ ಸರಿಪಡಿಸುವಂತೆ ಕೋರಿರುತ್ತಾರೆ. | ಸದರಿಯವರ ಮನವಿಯನ್ನು ಪರಿಶೀಲಿಸಲಾಗಿದ್ದು, ಅವರು ದಿನಾಂಕ: 07.05.2003 ರಲ್ಲಿ ಪಿ.ಎಸ್.ಐ. ಹುದ್ದೆಗೆ ನೇಮಕಗೊಂಡಿರುತ್ತಾರೆ. ಸದರಿಯವರ ತಂಡದಲ್ಲಿ ಅವರಿಗಿಂತ ಕಿರಿಯ ಅಧಿಕಾರಿಗೆ ದಿನಾಂಕ: 19.08.2011 ರಂದು ಪಿ.ಐ. ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ. ಆ ಸಮಯದಲ್ಲಿ ಸದರಿಯವರ ವಿರುದ್ಧ ಚಾಲ್ತಿ ಶಿಕ್ಷೆ ಮತ್ತು ಇಲಾಖಾ ವಿಚಾರಣೆಯು ಬಾಕಿ ಇದ್ದುದರಿಂದ, ಸದರಿಯವರನ್ನು ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ. ಸದರಿಯವರ ವಿರುದ್ಧ ಬಾಕಿ ಇದ್ದ ಚಾಲ್ತಿ ಶಿಕ್ಷೆಗಳು ಮತ್ತು ಇಲಾಖಾ ವಿಚಾರಣೆ ಮುಕ್ತಾಯಗೊಂಡ ನಂತರ ಅವರನ್ನು ದಿನಾಂಕ: 03.09.2015 ರಲ್ಲಿ ಪಿ.ಐ. ಹುದ್ದೆಗೆ ಮುಂಬಡ್ತಿ ನೀಡಿ ನಿಗಧಿಪಡಿಸಿರುವ ಜೇಷ್ಠತೆಯು ನಿಯಮಾನುಸಾರ ಸರಿಯಿರುತ್ತದೆ. |
| 5. | ಜಯರಾಮ ಎಸ್.ಎನ್. ಪಿ.ಐ | ಈ ಕಛೇರಿಯಿಂದ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಿ, ಸದರಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 3100 ರಲ್ಲಿ ನನ್ನ ಹೆಸರು ನಮೂದಾಗಿದ್ದು ಇನ್ಶಿಷಿಯಲ್ ಎಸ್.ಎನ್. ಎಂಬುವುದಕ್ಕೆ ಬದಲಾಗಿ ಎಸ್.ಎಂ. ಎಂದು ತಪ್ಪಾಗಿ ನಮೂದಾಗಿರುತ್ತದೆ. ಸದರಿ ನ್ಯೂನ್ಯತೆಯನ್ನು ಸರಿಪಡಿಸಿ ನಮೂದು ಮಾಡುವಂತೆ ಕೋರಿ ದಾಖಲಾತಿಗಳನ್ನು | ಈ ಸಂಬಂಧ ಸದರಿಯವರು ಸಲ್ಲಿಸಿರುವ ದಾಖಲಾತಿಯನ್ನು ಪರಿಶೀಲಿಸಲಾಗಿದ್ದು, ಜೇಷ್ಠತಾ ಪಟ್ಟಿಯಲ್ಲಿ ಅವರ ಹೆಸರನ್ನು JAYARAMA S.N. ಎಂದು ಕ್ರಮ ಸಂ: 3094 ರಲ್ಲಿ ಸರಿಪಡಿಸಿ ನಮೂದಿಸಲಾಗಿದೆ. |